**ಅರ್ಜಿ ಸಂಖ್ಯೆಃ 5/2025**

**ಪಿ.ಡಬ್ಲ್ಯೂಃ 1**

**ಸಾಕ್ಷಿಯನ್ನು ದಿನಾಂಕ 20.07.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**

**ಮುಖ್ಯವಿಚಾರಣೆಃ ಅರ್ಜಿದಾರರ ಪರವಾಗಿ ಶ್ರೀಎ.ಬಿಃ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ.

**2.** ನನ್ನ ಮುಖ್ಯ ವಿಚಾರಣೆಯ ಪೂರಕವಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

* ಕಾರ್ಮಿಕ ಅಧಿಕಾರಿ ನೀಡಿದ ಹಿಂಬರಹವನ್ನು **ನಿಪಿ.1** ಎಂದು,
* ಎದುರುದಾರರಿಗೆ ನಮ್ಮ ವಕೀಲರ ಮೂಲಕ ನೀಡಿದ ನೋಟಿಸನ್ನು **ನಿಪಿ.2** ಎಂದು,
* ಗುನ್ನ ನಂಃ71 /2014 ರ ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿಪಿ.3** ಎಂದು,
* ಕೃತ್ಯ ಸ್ಥಳ ಪಂಚನಾಮೆಯ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿಪಿ.4** ಎಂದು,
* ಕೃತ್ಯ ಸ್ಥಳದ ನಕಾಶೆಯ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿಪಿ.5** ಎಂದು,

**ಅರ್ಜಿ ಸಂಖ್ಯೆಃ 5/2025**

**ಪಿ.ಡಬ್ಲ್ಯೂಃ 1**

* ಅಂತಿಮ ವರ್ತಮಾನ ವರದಿ ಮತ್ತು ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ಅದನ್ನು **ನಿಪಿ.6** ಎಂದು,

* ಪೌಜುದಾರಿ ಪ್ರಕರಣ ಸಂಖ್ಯೆಃ96/2019 ರ ಸಾಕ್ಷಿದಾರರಾದ ಪ್ರಾ.ಸ.1 ರಿಂದ 10 ರವರ ಹೇಳಿಕೆಗಳನ್ನು ಒಟ್ಟಾಗಿ **ನಿಪಿ.**7 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಎದುರುದಾರರ ಪರ ವಕೀಲರು ಸಾಕ್ಷಿಯ ಪಾಟಿ ಸವಾಲಿಗೆ ಸಮಯ ಕೋರಿದ್ದಾರೆ. ಸಾಕ್ಷಿ ಉತ್ತರ ಪ್ರದೇಶ ರಾಜ್ಯದ ವಾಸಿಯಾಗಿದ್ದು, ಆದ್ದರಿಂದ ಸಾಕ್ಷಿಯ ಪಾಟಿ ಸವಾಲನ್ನು ನಾಳೆಗೆ ಮುಂದೂಡಲಾಗಿದೆ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**